**ಸಾಕ್ಷಿಗೆ ದಿನಾಂಕ 21.02.2026 ರಂದು ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ವಾದಿ ಪರ ಶ್ರೀ ವಕೀಲರಿಂದ**

ನನ್ನ ಮಾವನ ಹೆಸರು ಕಾಳೆಗೌಡ. ಕಾಳೆಗೌಡರವರ ತಂದೆಯ ಹೆಸರು ಡೊಳ್ಳೆಗೌಡ. ನನ್ನ ಮಾವನಿಗೆ 5 ಗಂಡು ಹಾಗೂ ಒಬ್ಬ ಹೆಣ್ಣು ಮಕ್ಕಳು. ಗಂಡು ಮಕ್ಕಳ ಹೆಸರು, ಪುಟ್ಟೇಗೌಡ, ನಿಂಗರಾಜೇಗೌಡ, ಜಯರಾಮೇಗೌಡ, ಕೃಷ್ಣೇಗೌಡ ಮತ್ತು ಡೊಳ್ಳೇಗೌಡ ಹಾಗೂ ಮಗಳ ಹೆಸರು ಅಶ್ವತ್ತಮ್ಮ. ವಾದಿ ಸರ್ವೆ ನಂಬರ 68 ಜಮೀನಿಗೆ ದಾವೆ ಸಲ್ಲಿಸಿರುತ್ತಾರೆ. ಸರ್ವೆ ನಂಬರ 68 ರ ಮೂಲ ಸರ್ವೆ ನಂಬರ ನನಗೆ ಗೊತ್ತಿಲ್ಲ. ಮೂಲ ಸರ್ವೆ ನಂಬರ 22 ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ 22 ರಲ್ಲಿ 3 ಎಕರೆ 20 ಗುಂಟೆ ಜಮೀನು ಇದೆ ಎಂದರೆ ಸರಿ. ಸರ್ವೆ ನಂಬರ 22 ರಲ್ಲಿ ಸರ್ಕಾರದವರು ಸುಮಾರು ಜನಕ್ಕೆ ಜಮೀನು ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ 22 ಯಾವಾಗ ದುರಸ್ತಾಯಿತು ನನಗೆ ಗೊತ್ತಿಲ್ಲ. ಸರ್ವೆ ನಂಬರ 22 ಜಮೀನಿನಲ್ಲಿ ಸರ್ಕಾರದವರು ನಮ್ಮ ಮಾವನಿಗೆ ಜಮೀನು ಕೊಟ್ಟಿದ್ದರು ನನ್ನ ಗಂಡನ ಅಣ್ಣ ತಮ್ಮಂದಿರು ಉಳುಮೆ ಮಾಡುತ್ತಿದ್ದಾರೆ. ಎಷ್ಟು ಎಕರೆ ನನ್ನ ಮಾವನಿಗೆ ಬಂದಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ಮಾವನ ಹೆಸರಿನಲ್ಲಿ ಇದ್ದ ಸಾಗುವಳಿ ಪತ್ರವನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿಗೆ ತಾನು ಹಾಜರುಪಡಿಸಿದ ದಾಖಲೆಗಳನ್ನು ತೋರಿಸಿ ಸಾಗುವಳಿ ಪತ್ರ ಯಾವುದು ಎಂದು ಕೇಳಿದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂಬರ 22 ರಲ್ಲಿ ಸರ್ಕಾರದಿಂದ ನನ್ನ ಮಾವನಿಗೆ ಯಾವುದೇ ಜಮೀನು ಮಂಜೂರಾಗಿಲ್ಲ ಎಂದರೆ ಸರಿಯಲ್ಲ. ಸರ್ಕಾರದಿಂದ ಮಂಜೂರಾದ ಜಮೀನಿನಲ್ಲಿ ನಾನು ಮತ್ತು ನನ್ನ ಭಾವಂದಿರು ಉಳುಮೆ ಮಾಡುತ್ತಿದ್ದೇವೆ.

ನನ್ನ ಮಾವನಿಗೆ ಸರ್ವೆ ನಂಬರ 22 ರಲ್ಲಿ ಮಂಜೂರಾಗಿದ್ದು ಅದು ಸರ್ವೆ ನಂಬರ 68 ಎಂದು ಯಾವಾಗ ಬದಲಾಯಿತು ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ 22

ದುರಿಸ್ಥಿಯಾಗಿ ಸರ್ವೆ ನಂಬರ 68 ಆದ ಬಗ್ಗೆ ನ್ಯಾಯಾಲಯದಲ್ಲಿ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಚೆಕ್ಕುಬಂದಿ ಪೂರ್ವಕ್ಕೆಃ ಕಾಳೇಗೌಡ ಮತ್ತು ಸಣ್ಣೇಗೌಡರವರ ಜಮೀನು, ಪಶ್ಚಿಮಕ್ಕೆಃ ರಸ್ತೆ, ಉತ್ತರಕ್ಕೆ ಮತ್ತು ದಕ್ಷಿಣಕ್ಕೆಃ ರಾಮಕೃಷ್ಣೇಗೌಡರವರ ಜಮೀನು ಇರುತ್ತದೆ. ರಾಮಕೃಷ್ಣೇಗೌಡರವರ ಜಮೀನು ಚೆಕ್ಕುಬಂಧಿ ನನಗೆ ಗೊತ್ತಿಲ್ಲ. ಸಾಕ್ಷಿ ನಾನು ಜಮೀನು ಹತ್ತಿರ ಹೋಗುವುದಿಲ್ಲ ಹಾಗಾಗಿ ಚೆಕ್ಕುಬಂದಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ನನಗಾಗಲಿ, ನನ್ನ ಗಂಡನಿಗಾಗಲಿ ಮತ್ತು ನನ್ನ ಮಾವನಿಗಾಗಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತು ಮೂಲತಃ ಕಾಳೇಗೌಡ ಬಿನ್ ಹುಚ್ಚೇಗೌಡರವರಿಗೆ ಸರ್ಕಾರದಿಂದ ಮಂಜೂರಾದ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ 22 ರಲ್ಲಿ ಮೂಲತಃ ಕಾಡು ಇತ್ತು ಎಂದರೆ ನನಗೆ ಗೊತ್ತಿಲ್ಲ. ಕಾಳೇಗೌಡರವರು 4 ಎಕರೆ ಜಮೀನನ್ನು ಕಾಡು ಕಡೆದು ವ್ಯವಸಾಯಕ್ಕೆ ಯೋಗ್ಯವಾದ ಜಮೀನನ್ನಾಗಿ ಮಾಡಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ನನ್ನ ಭಾವಂದಿರು ಗೊತ್ತು ಎಂದು ನುಡಿಯುತ್ತಾರೆ. ದಿಃ16.01.1957 ರಂದು ಕಾಳೇಗೌಡ ಬಿನ್ ಹುಚ್ಚೇಗೌಡರವರಿಗೆ ದಾವಾ ಸ್ವತ್ತು ಸರ್ಕಾರದಿಂದ ಮಂಜೂರಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಕಾಳೇಗೌಡರವರ ಜೊತೆಯನ್ನು ಇನ್ನು ಸಾಕಷ್ಟು ಜನರು ಉಳುಮೆ ಮಾಡುತ್ತಿದ್ದರು ಅವರಿಗೂ ಸಹ ಸರ್ಕಾರದಿಂದ ಸರ್ವೆ ನಂಬರ 22 ರ ಜಮೀನು ಮಂಜುರಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ 22 ಸರ್ವೆ ನಂಬರ 68 ಎಂದು ದುರಸ್ಥಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕಾಳೇಗೌಡರವರು ತಮಗೆ ಮಂಜುರಾದ ಜಮೀನನ್ನು ದಿಃ10.08.1965 ರಂದು ಗೌಡ ಬೋರೆಗೌಡ ಬಿನ್ ತೋಪೇಗೌಡರವರಿಗೆ ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಗೌಡ ಬೋರೆಗೌಡರವರು ದಿಃ05.02.1973 ರಂದು ಜಮೀನನ್ನು ರಾಮೇಗೌಡ ಬಿನ್ ಕರಿಗೌಡರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ರಾಮೇಗೌಡರವರು ಜಮೀನನ್ನು ಖರೀದಿಸಿದ ದಿನದಿಂದಲೂ ದಾವಾ ಸ್ವತ್ತಿನಲ್ಲಿ ಮಾಲೀಕರಾಗಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಕಾಳೇಗೌಡ ಬಿನ್ ಹುಚ್ಚೇಗೌಡ ಹೆಸರನ್ನು ತಿದ್ದುಪಡಿ ಮಾಡಿ ಕಾಳೇಗೌಡ ಬಿನ್ ಡೊಳ್ಳೆಗೌಡ ಎಂದು ಕಾನೂನು ಬಾಹಿರವಾಗಿ ತಿದ್ದುಪಡಿ ಮಾಡಿಕೊಂಡಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ವಾದಿಯ ತಂದೆ ರಾಮೇಗೌಡ ಅನಕ್ಷರಸ್ಥರು ಎಂದರೆ ನನಗೆ ಗೊತ್ತಿಲ್ಲ. ರಾಮೇಗೌಡ ಅನಕ್ಷರಸ್ಥರಾಗಿದ್ದರಿಂದ ಕಂದಾಯ ದಾಖಲೆಗಳನ್ನು ಪರೀಶಿಲನೆ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ಭಾವಂದಿರು ಉಳುಮೆ ಮಾಡುತ್ತಿರುವ ಜಮೀನಿನ ಸರ್ವೆ ನಂಬರ 22 ನಾನು ಉಳುಮೆ ಮಾಡುತ್ತಿರುವ ಜಮೀನಿನ ಸರ್ವೆ ನಂಬರ 68. ನನ್ನ ಭಾವಂದಿರಿಗೆ ಜಮೀನು ಹೇಗೆ ಬಂತು ನನಗೆ ಗೊತ್ತಿಲ್ಲ. ನನ್ನ ಮಾವನಿಗೆ ಎರಡು ಬಾರಿ ಜಮೀನು ಮಂಜುರಾಗಿರುತ್ತದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ಮಾವ ಸರ್ವೆ ನಂಬರ 22 ರಲ್ಲಿ ಜಮೀನಿನ್ನು ಕ್ರಯಕ್ಕೆ ಪಡೆದುಕೊಂಡಿದ್ದಾರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-8 ಮೊಸದಿಂದ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ನನ್ನ ಗಂಡನಿಗೆ ಗೊತ್ತು ಎಂದು ನುಡಿಯುತ್ತಾರೆ. ನಾನಾಗಲಿ, ನನ್ನ ಗಂಡನಾಗಲಿ, ನನ್ನ ಮಾವನಾಗಲಿ ಯಾವುದೇ ಜಮೀನನ್ನು ಕ್ರಯಕ್ಕೆ ತೆಗೆದುಕೊಂಡಿಲ್ಲ.

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ಬರೆದಿರುವ ವಿಚಾರಗಳು ಗೊತ್ತು. ಪ್ರತಿವಾದ ಪತ್ರವನ್ನು ಬರೆಯಲು ನಾನು ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ಜಮೀನು ಬಿಡಿಸಿಕೊಡಿ ಎಂದು ಪ್ರತಿವಾದ ಪತ್ರದಲ್ಲಿ ಹೇಳಿರುತ್ತೇನೆ. ನಾನು ಸ್ವಾಧೀನದಲ್ಲಿರುವ ಸರ್ವೆ ನಂಬರ 68 ರ ಚೆಕ್ಕುಬಂದಿ ಪೂರ್ವಕ್ಕೆಃ ಕಾಳೇಗೌಡ ಮತ್ತು ಸಣ್ಣೇಗೌಡರವರ ಜಮೀನು, ಉತ್ತರಕ್ಕ ರಸ್ತೆ, ಪಶ್ಚಿಮಕ್ಕೆಃ ಜಮೀನು, ದಕ್ಷಿಣಕ್ಕೆಃ ಶಿವೇಗೌಡರವರ ಜಮೀನು ಇರುತ್ತದೆ. ಕಾಳೇಗೌಡ, ರಾಮಕೃಷ್ಣೇಗೌಡ ಮತ್ತು ಶಿವೇಗೌಡರವರ ಜಮೀನಿನ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ವಾದಿ ದಾವೆ ಸಲ್ಲಿಸುವ ಪೂರ್ವದಲ್ಲಿ ನೋಟೀಸ್

ಕಳುಹಿಸಿರುತ್ತಾರೆ ಎಂದರೆ ಸರಿ. ಸದರಿ ನೋಟೀಸಗೆ ವಕೀಲರ ಮೂಲಕ ಪ್ರತ್ಯುತ್ತರವನ್ನು ನೀಡಿರುತ್ತೇನೆ ಎಂದರೆ ಸರಿ. ನಿಪಿ-23 ರಲ್ಲಿ ನಾನು ಸ್ವಾಧೀನದಲ್ಲಿರುವ ಜಮೀನಿನ ಚೆಕ್ಕುಬಂದಿ ಬರೆಸಿರುತ್ತೇನೆ ಎಂದರೆ ಸರಿ. ಪ್ರತ್ಯುತ್ರದಲ್ಲಿ 1957 ರಲ್ಲಿ ಸರ್ಕಾರ ಕಾಳೇಗೌಡ ಬಿನ್ ಡೊಳ್ಳೇಗೌಡರವರಿಗೆ ಸರ್ವೆ ನಂಬರ 68 ರಲ್ಲಿ 3 ಎಕರೆ 39 ಗುಂಟೆ ಜಮೀನು ಮಂಜುರೂ ಮಾಡಿರುತ್ತಾರೆ ಎಂದು ಬರೆಸಿರುತ್ತೇನೆ ಎಂದರೆ ಸರಿ. ನೋಟೀಸ್ ಗೆ ಪ್ರತ್ಯುತ್ತರ ಕೊಡುವ ಸಮಯದಲ್ಲಿ ದಾಖಲೆಗಳನ್ನು ಇಟ್ಟುಕೊಂಡು ನಾನು ಪ್ರತ್ಯುತ್ತರವನ್ನು ನೀಡಿರುತ್ತೇನೆ. ಸದರಿ ದಾಖಲೆಗಳು ಮನೆಯಲ್ಲಿವೆ ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ.

ಚೆಕ್ಕುಬಂದಿಯಲ್ಲಿ ಹೇಳಿರುವ ರಾಮಕೃಷ್ಣೇಗೌಡರವರ, ಕಾಳೇಗೌಡರವರ ಮತ್ತು ಶಿವೇಗೌಡರವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ನನ್ನ ಮಾವ ಸರ್ವೆ ನಂಬರ 39 ರಲ್ಲಿ ಉಳುಮೆ ಮಾಡುತ್ತಿದ್ದರು ದಾವ ಸ್ವತ್ತಿನಲ್ಲಿ ಉಳುಮೆ ಮಾಡುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಪುಟ್ಟೇಗೌಡ, ನಿಂಗರಾಜೇಗೌಡ, ಜಯರಾಮೇಗೌಡ, ಕೃಷ್ಣೇಗೌಡ ಮತ್ತು ಡೊಳ್ಳೇಗೌಡರವರಿಗೆ ಸರ್ವೆ ನಂಬರ 39 ರಲ್ಲಿ 4 ಎಕರೆ ಜಮೀನು ನಿಪಿ-13 ರ ಪ್ರಕಾರ ಖಾತಾ ಬದಲಾವಣೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪುಟ್ಟೇಗೌಡ, ನಿಂಗರಾಜೇಗೌಡ, ಜಯರಾಮೇಗೌಡ, ಕೃಷ್ಣೇಗೌಡ ಮತ್ತು ಡೊಳ್ಳೇಗೌಡರವರು ಸರ್ವೆ ನಂಬರ 39, 4 ಎಕರೆ ಜಮೀನಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಸಾಕ್ಷಿ ನನ್ನ ಮಾವನ ಐದು ಜನ ಗಂಡು ಮಕ್ಕಳ ಹೆಸರಿನಲ್ಲಿ ತಲಾ 4 ಎಕರೆ ಜಮೀನಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದು ನುಡಿಯುತ್ತಾರೆ. ನನಗೆ ಸರ್ವೆ ನಂಬರ ಗೊತ್ತಿಲ್ಲ. ಸರ್ಕಾರದಿಂದ ಒಟ್ಟು 20 ಎಕರೆ ಜಮೀನು ಮಂಜೂರಾದ ಬಗ್ಗೆ ದಾಖಲೆ ಇದೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಹಾಜರುಪಡಿಸಲು ತೊಂದರೆ ಇಲ್ಲ. ಸಾಕ್ಷಿ ನನ್ನ ಮಾವ ಬದುಕಿದ್ದಾಗ ತಲಾ 4 ಎಕರೆ ಜಮೀನು ಮಕ್ಕಳಿಗೆ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಮಾವನಿಗೆ 20 ಎಕರೆ ಜಮೀನು ಇರಲಿಲ್ಲ ನನ್ನ ಭಾವಂದಿರು ತಲಾ 4 ಎಕರೆ ಜಮೀನಿನಲ್ಲಿ ಉಳುಮೆ ಮಾಡುತ್ತಿಲ್ಲ ಎಂದರೆ ಸರಿಯಲ್ಲ.ಡೊಳ್ಳೇಗೌಡ

ಬಿನ್ ಕಾಳೇಗೌಡರವರ ಹೆಸರಿಗೆ ತಪ್ಪಾಗಿ ಖಾತೆ ಆಗಿರುವುದನ್ನು ಮಾನ್ಯ ಉಪವಿಭಾಗಧಿಕಾರಿಗಳು ರದ್ದು ಪಡಿಸಿರುತ್ತಾರೆ ಎಂದರೆ ಸರಿ. ಸದರಿ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದೇವು ಎಂದರೆ ಸರಿ. ಸದರಿ ಮೇಲ್ಮನವಿ ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-2 ರ ದಾಖಲೆ ವಾದಿಯ ಹೆಸರಿಗೆ ಖಾತೆ ಬದಲಾವಣೆ ಆದ ದಾಖಲೆ ಎಂದರೆ ಸರಿ. ನಿಡಿ-6 ರಲ್ಲಿ ಮೂಲ ಮಾಲೀಕರು ಕಾಳೇಗೌಡ ಬಿನ್ ಹುಚ್ಚೇಗೌಡರವರ ಹೆಸರು ನಮೂದು ಇದೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-7 ರಲ್ಲಿ ಕಾಳೇಗೌಡ ಬಿನ್ ಡೊಳ್ಳೇಗೌಡರವರ ಹೆಸರು ನಮೂದು ಆಗಿದೆ ಎಂದರೆ ಸರಿ. ಸರ್ವೆ ನಂಬರ 39 ಪಹಣಿ ಪತ್ರಿಕಯಲ್ಲಿ ಕಾಳೇಗೌಡ ಬಿನ್ ಹುಚ್ಚೇಗೌಡರವರಿಗೆ ದರ್ಕಾಸ್ತು ಮೂಲಕ ಮಂಜೂರಾಗಿದೆ ಎಂದರೆ ಸರಿ. ನನ್ನ ಮಾವನಿಗೆ ಸರ್ಕಾರದಿಂದ ಸರ್ವೆ ನಂಬರ 68 ರಲ್ಲಿ ಜಮೀನು ಮಂಜೂರಾಗಿದ್ದರೆ ಸಾಗುವಳಿ ಚೀಟಿ ಕೊಡುತ್ತಿದ್ದರು ಜಮೀನು ಮಂಜೂರಾಗಿಲ್ಲ ಹಾಗಾಗಿ ಸಾಗುವಳಿ ಚೀಟಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-15 ರಲ್ಲಿ ನನ್ನ ಮಾವ ಕಾಳೇಗೌಡರವರ ಹೆಸರು ಇಲ್ಲ ಕಾಳೇಗೌಡ ಬಿನ್ ಹುಚ್ಚೇಗೌಡ ಎಂಬ ಹೆಸರು ಇದೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀಸವಾಲಿಗೆ ಕಾಲವಕಾಶ ಕೇಳಿದ್ದು ಕಾಲವಕಾಶ ನೀಡಲಾಯಿತು.

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ.ಸರಿ ಇದೆ.**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಹುಣಸೂರು.**